# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 1158 |
| **ಮಾನ್ಯ ಸದಸ್ಯರ ಹೆಸರು** | : | ಶ್ರೀ. ಎಸ್.ರವಿ<br>(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| **ಉತ್ತರಿಸಬೇಕಾದ ದಿನಾಂಕ** | : | 19.12.2024 |
| **ಉತ್ತರಿಸುವ ಸಚಿವರು** | : | ಮಾನ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು |

<table>
<tr><th>ಕ್ರ.<br>ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr>
<td>ಅ)</td>
<td>ಪ್ರವಾಸೋದ್ಯಮ ಇಲಾಖೆಯಡಿ ಬರುವ ನಿಗಮಗಳಲ್ಲಿ ಗುತ್ತಿಗೆ, ಹೊರಗುತ್ತಿಗೆ ಆಧಾರದ ಮೇಲೆ ನಿವೃತ್ತ ಸರ್ಕಾರಿ ಅಧಿಕಾರಿ/ನೌಕರರು ಕರ್ತವ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸಿಬ್ಬಂದಿ/ಅಧಿಕಾರಿಗಳ ಹೆಸರು, ಹುದ್ದೆ ಮತ್ತು ಪಾವತಿಸುತ್ತಿರುವ ವೇತನ, ಇತರೆ ಭತ್ಯೆಗಳು ಹಾಗೂ ನೀಡುತ್ತಿರುವ ಎಲ್ಲಾ ಸೌಲಭ್ಯಗಳು ವಿವರಗಳನ್ನು ಆದೇಶದ ಪ್ರತಿಯೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು.</td>
<td>ಅರಣ್ಯ ವಸತಿ ಮತ್ತು ವಿಹಾರಧಾಮಗಳ ಸಂಸ್ಥೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ನಿವೃತ್ತ ಸರ್ಕಾರಿ ಅಧಿಕಾರಿ/ ನೌಕರರ ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ<br>ಸಂ</th><th>ಹೆಸರು ಮತ್ತು<br>ಹುದ್ದೆ</th><th>ಮಾಸಿಕ<br>ವೇತನ</th><th>ಇನ್ನಿತರ<br>ಸೌಲಭ್ಯ</th></tr>
<tr><td>1</td><td>ಶ್ರೀ. ಮೊಹಮ್ಮದ್ ಗಯಾಜ್, ವ್ಯವಸ್ಥಾಪಕರು (ಹಣಕಾಸು)</td><td>ರೂ.60,000/-</td><td>--</td></tr>
<tr><td>2</td><td>ಶ್ರೀ ಯತಿರಾಜ್ ಬಿ.ಎನ್., ಹಿರಿಯ ಆಡಳಿತಾಧಿಕಾರಿ</td><td>ರೂ.50,000/-</td><td>ಕಚೇರಿ ವಾಹನ</td></tr>
</table>
ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ನಿವೃತ್ತ ಸರ್ಕಾರಿ ಅಧಿಕಾರಿ/ ನೌಕರರ ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ<br>ಸಂ</th><th>ಹೆಸರು ಮತ್ತು<br>ಹುದ್ದೆ</th><th>ಮಾಸಿಕ<br>ವೇತನ</th><th>ಇನ್ನಿತರ<br>ಸೌಲಭ್ಯ</th></tr>
<tr><td>1</td><td>ಶ್ರೀ. ರತ್ನಾಕರ್ ಎ.ಎಸ್. ನಿಗಮದ ಅಧ್ಯಕ್ಷರ ಪ್ರವಾಸೋದ್ಯಮ ಸಲಹೆಗಾರರು (Retainership ಆಧಾರದ ಮೇಲೆ)</td><td>ರೂ.50,000/-</td><td>ಕಚೇರಿ ವಾಹನ</td></tr>
</table>
</td>
</tr>
</table>

| | | |
|---|---|---|
| ಆ) | ಸರ್ಕಾರದ ವಿವಿಧ ಇಲಾಖೆಗಳಲ್ಲಿ ಹಾಗು ನಿಗಮ ಮಂಡಳಿಗಳಲ್ಲಿ ಗುತ್ತಿಗೆ, ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ನಿವೃತ್ತ ಸರ್ಕಾರಿ ಅಧಿಕಾರಿ/ನೌಕರರನ್ನು ಕೂಡಲೇ ಕರ್ತವ್ಯದಿಂದ ಬಿಡುಗಡೆಗೊಳಿಸಲು ಸರ್ಕಾರ ಆದೇಶಿಸಿ ಸುಮಾರು 5 ತಿಂಗಳುಗಳು ಕಳೆದರೂ, ಇಂದಿಗೂ ಪ್ರವಾಸೋದ್ಯಮ ಇಲಾಖೆ ಹಾಗು ಇಲಾಖೆಯಡಿ ಬರುವ ನಿಗಮ ಮಂಡಳಿಗಳಲ್ಲಿ ನಿವೃತ್ತ ಸರ್ಕಾರಿ ಅಧಿಕಾರಿ/ ನೌಕರರು ಕರ್ತವ್ಯ ನಿರ್ವಹಿಸುತ್ತಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ; ಹಾಗಿದ್ದಲ್ಲಿ, ಸದರಿಯವರನ್ನು ಕರ್ತವ್ಯದಿಂದ ಬಿಡುಗಡೆ ಗೊಳಿಸಲು ಇಂದಿಗೂ ಕ್ರಮ ಕೈಗೊಳ್ಳದಿರಲು ಕಾರಣಗಳೇನು: ಸದರಿಯವರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಯಾವ ಕಾಲಮಿತಿಯೊಳಗಾಗಿ ಕರ್ತವ್ಯದಿಂದ ಬಿಡು ಗಡೆಗೊಳಿಸಲಾಗುವುದು?(ಸಂಪೂರ್ಣ ವಿವರ ನೀಡುವುದು) | ಅರಣ್ಯ ವಸತಿ ಮತ್ತು ವಿಹಾರಧಾಮಗಳ ಸಂಸ್ಥೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಒಟ್ಟು 650 ಹುದ್ದೆಗಳು ಮಂಜೂರಾಗಿದ್ದು, ಇದರಲ್ಲಿ 171 ಖಾಯಂ ನೌಕರರು ಮಾತ್ರ ಇದ್ದು, ಆಡಳಿತಾತ್ಮಕ ಹಿತದೃಷ್ಟಿಯಿಂದ ಸಂಸ್ಥೆಗೆ 02 ನಿವೃತ್ತ ನೌಕರರನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗಿದ್ದು, ಸದರಿಯವರುಗಳ ಸೇವಾ ಅನುಭವ ಸಂಸ್ಥೆಯ ಅಭಿವೃದ್ಧಿ ಹಾಗು ಕಾರ್ಯನಿರ್ವಹಣೆಗೆ ಅನುಕೂಲ ಆಗುತ್ತದೆ. ಇವರಿಗೆ ಮಾಸಿಕ ಸಂಚಿತ ವೇತನವನ್ನು ಸಂಸ್ಥೆಯ ಆಂತರಿಕ ಸಂಪನ್ಮೂಲದಿಂದ ನೀಡುತ್ತಿದೆ. ಇದೊಂದು ತಾತ್ಕಾಲಿಕ ವ್ಯವಸ್ಥೆಯಾಗಿದ್ದು, ಸದರಿ ಹುದ್ದೆಗಳಿಗೆ ನೇರ ನೇಮಕಾತಿ ಅಥವಾ ನಿಯೋಜನೆ ಮೇಲೆ ಭರ್ತಿ ಮಾಡಿದ ನಂತರ ಈ ವ್ಯವಸ್ಥೆ ರದ್ದುಗೊಳ್ಳುತ್ತದೆ. |

**ಸಂಖ್ಯೆ:ಟಿಓಆರ್ 308 ಟಿಡಿವಿ 2024**

(ಹೆಚ್.ಕೆ. ಪಾಟೀಲ್)
ಕಾನೂನು, ನ್ಯಾಯ, ಮಾನವ ಹಕ್ಕುಗಳು,
ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ
ಪ್ರವಾಸೋದ್ಯಮ ಸಚಿವರು